# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 22.04.2022 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ರಾಣಿ ಅಬ್ಬಕ್ಕ (ಹೊಸ ಸೆನೆಟ್) ಸಭಾಂಗಣದಲ್ಲಿ ನಡೆದ ಶೈಕ್ಷಣಿಕ ಮಂಡಳಿಯ 2022–23ನೇ ಸಾಲಿನ ಪ್ರಥಮ ವಿಶೇಷ ಸಭೆ (ಘಟಿಕೋತ್ಸವ)ಯ ನಡವಳಿಗಳು.**

**ಉಪಸ್ಥಿತರು**

**ಅನುಪಸ್ಥಿತರು**

**ಪ್ರಾರಂಭಿಕ**

ಪ್ರಾರಂಭದಲ್ಲಿ ಮಾನ್ಯ ಕುಲಪತಿಗಳು ಎಲ್ಲಾ ಅಧಿಕಾರಿಗಳು, ಸದಸ್ಯರುಗಳು, ವಿಶೇಷ ಆಹ್ವಾನಿತರು ಮಾಧ್ಯಮ ಮಿತ್ರರು ಮತ್ತು ಇತರರನ್ನು ಸಭೆಗೆ ಸ್ವಾಗತಿಸಿದರು.

➢ **ಸ್ವಾಗತ:**

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿಯಮ 2000ದ ಪ್ರಕರಣ 30 (1) (vii) ರ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ಪ್ರಾಧ್ಯಾಪಕರ ನೆಲೆಯಲ್ಲಿ ಜೇಷ್ಠತೆ ಹಾಗೂ ಸರದಿಯ ಮೇರೆಗೆ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಈ ಕೆಳಗಿನ ಪ್ರಾಧ್ಯಾಪಕರುಗಳನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

1. ಡಾ. ಬಿ. ನಾರಾಯಣ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
2. ಡಾ. ಎಂ. ಜಯಶಂಕರ್, ಪ್ರಾಧ್ಯಾಪಕರು, ಸ್ನಾತಕೋತ್ತರ ಸೂಕ್ಷ್ಮಾಣುಜೀವ ವಿಜ್ಞಾನ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನ ಕಾವೇರಿ ಚಿಕ್ಕ ಅಳುವಾರ
3. ಡಾ. ಶಿವಣ್ಣ, ಪ್ರಾಧ್ಯಾಪಕರು, ಸ್ನಾತಕೋತ್ತರ ಸಾಗರ ಭೂ ವಿಜ್ಞಾನ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
4. ಡಾ. ಮಂಜಯ್ಯ ಡಿ. ಹೆಚ್., ಪ್ರಾಧ್ಯಾಪಕರು, ಸ್ನಾತಕೋತ್ತರ ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ
5. ಡಾ. ಕೆ. ಭಾಸ್ಕರ ಶೆಣೈ, ಪ್ರಾಧ್ಯಾಪಕರು, ಸ್ನಾತಕೋತ್ತರ ಆನ್ವಯಿಕ ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ

II. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000 ದ ಪ್ರಕರಣ 30(1) (x) ರ ಪ್ರಕಾರ ಮತ್ತು ಶೈಕ್ಷಣಿಕ ಮಂಡಳಿಗೆ ವಿದ್ಯಾರ್ಥಿ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡುವ ಪರಿನಿಯಮದ ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಶೈಕ್ಷಣಿಕ ಮಂಡಳಿಗೆ ವಿದ್ಯಾರ್ಥಿ ಪ್ರತಿನಿಧಿಗಳ ನೆಲೆಯಲ್ಲಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಈ ಕೆಳಗಿನ ವಿದ್ಯಾರ್ಥಿ ಪ್ರತಿನಿಧಿಗಳನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

1. ಕು. ಯಶಸ್ವಿ ಸಿ. ಟಿ., ತೃತೀಯ ಬಿ.ಎಸ್ಸಿ., ಫೀಲ್ಡ್ ಮಾರ್ಷಲ್ ಕೆ. ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ
2. ಕು. ಶ್ರೇಯಾ ರಾವ್ ಎಸ್., ತೃತೀಯ ಬಿ.ಕಾಂ., ಎಸ್. ಡಿ. ಎಂ. ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಮಂಗಳೂರು
3. ಶ್ರೀ ಜೋಯಲ್ ರಿವಸ್ಸ್ನ ಪಿಂಟೋ, ದ್ವಿತೀಯ ಎಂ.ಎಸ್ಸಿ., ಸ್ನಾತಕೋತ್ತರ ಜೀವ ವಿಜ್ಞಾನ ವಿಭಾಗ (ಬಯೋಟೆಕ್ನಾಲಜಿ) ಮಂಗಳೂರು ವಿಶ್ವವಿದ್ಯಾನಿಲಯ
4. ಕು. ಪ್ರಣೀತ ಸಿ. ಶೆಟ್ಟಿ, ತೃತೀಯ ಬಿ.ಕಾಂ., ಶ್ರೀ ಶಾರದಾ ಕಾಲೇಜು, ಬಸ್ರೂರು
5. ಶ್ರೀಮತಿ ರೂಪಶ್ರೀ ಧರ್ಮಯ್ಯ, ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ

## ಪ್ರಾಸ್ತಾವಿಕ

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು.

1. ಮಂಗಳೂರು ವಿಶ್ವವಿದ್ಯಾನಿಲಯದ 40ನೇ ವಾರ್ಷಿಕ ಘಟಿಕೋತ್ಸವವನ್ನು ದಿನಾಂಕ 23.04.2022ರಂದು ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಹಮ್ಮಿಕೊಂಡಿರುವ ವಿಚಾರವನ್ನು ಸಭೆಗೆ ತಿಳಿಸುತ್ತಾ, ಘನತೆವೆತ್ತ ರಾಜ್ಯಪಾಲರು ಘಟಿಕೋತ್ಸವದ ಅಧ್ಯಕ್ಷತೆ ವಹಿಸಲಿರುವ ವಿಚಾರವನ್ನು ಸಭೆಗೆ ತಿಳಿಸಿದರು. ಮುಂದುವರಿದು, ಘಟಿಕೋತ್ಸವದ ತಯಾರಿ ಹಾಗೂ ಮುಖ್ಯ ಅತಿಥಿಗಳ ವಿವರಗಳನ್ನು ವಿಸ್ತಾರವಾಗಿ ಸಭೆಗೆ ತಿಳಿಸಿದರು.
2. ಘನತೆವೆತ್ತ ರಾಜ್ಯಪಾಲರ Minute to Minute Programme ನ್ನು ಸಭೆಗೆ ವಿವರಿಸಿದರು.
3. 40 ನೇ ಘಟಿಕೋತ್ಸವದ Minute to Minute Programme ನ್ನು ಸಭೆಗೆ ಮಂಡಿಸಿದರು.
4. 40 ನೇ ಘಟಿಕೋತ್ಸವದಲ್ಲಿ ಘನತೆವೆತ್ತ ರಾಜ್ಯಪಾಲರು ಅಧ್ಯಕ್ಷೀಯ ಭಾಷಣ ಮಾಡಲಿರುವ ವಿಚಾರವನ್ನು ಸಭೆಗೆ ತಿಳಿಸಿದರು.

1. **ಕುಲಪತಿಗಳು, ಸಿಂಡಿಕೇಟು, ನಿಕಾಯಗಳು ಮತ್ತು ಅಧ್ಯಯನ ಮಂಡಳಿಗಳಿಂದ ಬಂದ ಪ್ರಸ್ತಾವನೆಗಳು:**
   **ಈ ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.**

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ:ಶೈ.ವಿ.ಸ.1:1 (2022–23)**

**ವಿಷಯ:** 40ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪದವಿ ಪಡೆಯಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳ ಪಟ್ಟಿ

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:** **ಎಸಿಸಿ:ಶೈ.ವಿ.ಸ.1:2 (2022–23)**

**ವಿಷಯ:** ಮಂಗಳೂರು ವಿಶ್ವವಿದ್ಯಾನಿಲಯದ 40ನೇ ವಾರ್ಷಿಕ ಘಟಿಕೋತ್ಸವದ ಸಂದರ್ಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಬಗ್ಗೆ.

**ನಿರ್ಣಯ:** ಪ್ರಸ್ತಾವನೆಯಲ್ಲಿ ನಮೂದಿಸಿರುವ ಮಹನೀಯರುಗಳಾದ ಶ್ರೀಮತಿ ಹೇಮಾವತಿ ವಿ. ಹೆಗ್ಗಡೆ (ಶಿಕ್ಷಣ ಮತ್ತು ಸಮಾಜ ಸೇವೆ), ಶ್ರೀ ಹರಿಕೃಷ್ಣ ಪುನರೂರು (ಸಮಾಜ ಸೇವೆ ಮತ್ತು ಸಾಹಿತ್ಯ) ಮತ್ತು ಶ್ರೀ ದೇವದಾಸ್ ಕಾಪಿಕಾಡ್ (ಕಲೆ (ತುಳು ನಾಟಕ/ಚಿತ್ರರಂಗ)) ಇವರುಗಳಿಗೆ ಮಂಗಳೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವರು

ಸಹಿ/-
ಕುಲಪತಿಗಳು.